

ಜಕಾರ್ತದ ಈ ಬಯಲಿನಲ್ಲಿ ಬೀಜಗಳ ಬಿತ್ತನೆ ನಡೆದಿಲ್ಲ; ದೇಹಗಳ ಬಿತ್ತನೆ ನಡೆದಿದೆ.





ಅಗಲಿದವರ ನೆನಪುಗಳ ಆಲಿಂಗನ...

ಸಾಯುತ್ತಿದ್ದಾರೆ.

ಕಣ್ಣಮುಂದೆಯೇ ಉಸಿರುಗಟ್ಟುತ್ತಿರುವ ಇಷ್ಟಪಾತ್ರರನ್ನು ಬದಲಿಸಿಕೊಳ್ಳಲು ಜನ ಆಮ್ಲಜನಕ ದೊರಕಿಸಿಕೊಳ್ಳಲು ಹಗಲಿರುಳು ಕಾಯುತ್ತಿದ್ದಾರೆ. ಬದುಕು ಎಷ್ಟು ದಾರುಣವಲ್ಲವೆ?

ಮತ್ತೊಂದು ಚಿತ್ರದಲ್ಲಿ, ಇಂಡೋನೇಷ್ಯಾದ ಜಕಾರ್ತದ ಬಯಲನ್ನು ಗಮನಿಸಿ. ಬಯಲಿನಲ್ಲಿ ಯಾರೋ ನಾಟಿ ಮಾಡಿ ಹೋದಂತೆ ಕಾಣಿಸುತ್ತದೆ. ಹೊಸ ಚಿಗುರಿಗೆ ನೆಲ ಸಜ್ಜಾಗಿರುವಂತೆ ಭಾಸವಾಗುತ್ತದೆ. ಆದರೆ, ಅಲ್ಲಿ ನಡೆದಿರುವುದು ಬೀಜಗಳ ನಾಟಿಯಲ್ಲ; ಮನುಷ್ಯರ ದೇಹಗಳ ಬಿತ್ತನೆ. ಮಧುರಚೆನ್ನರ ಅಂತ್ಯಸಂಸ್ಕಾರದ ಸಂದರ್ಭದಲ್ಲಿ, 'ಅವರನ್ನು ನಾವಿಲ್ಲಿ ಹುಗಿದಿಲ್ಲ, ಬಿತ್ತೀವಿ' ಎಂದು ಬೇಂದ್ರೆ ಉದ್ಗರಿಸಿದ್ದರಂತೆ. ಅದು ಅದ್ಭುತ ಆಶಾಭಾವ. ನೆನಪುಗಳನ್ನು, ವಿಚಾರಗಳನ್ನು, ಪ್ರೀತಿಯನ್ನು ಉಳಿಸಿಕೊಳ್ಳಬೇಕಾದ ಮಾದರಿಯನ್ನು ಸೂಚಿಸುವ ರೀತಿ. ಕೊರೊನಾ ಸಂದರ್ಭದಲ್ಲೂ ಮನುಷ್ಯರ ಅಂತ್ಯಸಂಸ್ಕಾರವನ್ನು ನಾವು 'ಬಿತ್ತನೆ' ಎಂದೇ ಭಾವಿಸಬೇಕೇನೊ? ಜಕಾರ್ತದ ಮಸಣವನ್ನು ನೋಡಿದರೆ, ಮುಂದೊಂದು ದಿನ ಅಲ್ಲಿ ಈ ಜಗತ್ತಿಗೆ ಅಗತ್ಯವಾದ ಪ್ರೇಮದ ಮಾದರಿಯೊಂದು ಚಿಗುರುವುದೇನೊ ಅನ್ನಿಸುತ್ತದೆ.

ನೋವು ಸಾವಿನ ಚಿತ್ರಗಳಿಂದ ನಲಿವಿನ ಚಿತ್ರಗಳತ್ತ ಬನ್ನಿ. ಫೆಬ್ರುವರಿ 14 ಹೊಸ್ತಿಲಲ್ಲಿದೆ. ಕೊರೊನಾ ಸಂಕಷ್ಟದ ನಡುವೆಯೂ ಪ್ರೇಮಿಗಳ ಪಾಲಿನ ವಾರ್ಷಿಕ ಸಂಭ್ರಮವಾದ 'ವ್ಯಾಲೆಂಟೈನ್ಸ್ ಡೇ' ಆಚರಣೆಯನ್ನು ಜಗತ್ತು ಮರೆತಿಲ್ಲ. ಕೊಲಂಬಿಯಾದಲ್ಲಿನ ಬೊಗೋಟಾ ನಗರದ ಚಿತ್ರವನ್ನು ನೋಡಿ. 'ಪ್ರೇಮಿಗಳ ದಿನ' ಆಚರಣೆಯ ಸಂಭ್ರಮಕ್ಕಾಗಿ ಅಲ್ಲಿ ಹೂಗಳ ಪೇಟೆಯೊಂದು ರಂಗುಪಡೆದುಕೊಳ್ಳುತ್ತಿದೆ. ಹೂವು ಸಂಭ್ರಮಕ್ಕೂ ಒದಗುತ್ತದೆ, ಶ್ರದ್ಧಾಂಜಲಿಗೂ ಒದಗುತ್ತದೆ.

ನಿಜ, ಸಾವಿನ ಮನೆಯಲ್ಲೂ ಬದುಕಿನ ಪ್ರೇರಣೆಯೊಂದು ಮಿಡಿಯುತ್ತಿರುತ್ತದೆ. ಕೊರೊನಾದ ಸಂಕಷ್ಟಗಳ ನಡುವೆಯೂ ವ್ಯಾಲೆಂಟೈನ್ಸ್ ಡೇ ಆಚರಣೆಯ ರಮ್ಯ ಬಿಂಬಗಳು ಇಣುಕುತ್ತಿರುತ್ತವೆ. ಅದು ಸಹಜ, ಮನುಷ್ಯಸಹಜ. ಆದರೆ, ಈ ಸಂಭ್ರಮ ಎಂದಿನಂತಿಲ್ಲ, ಇರುವಂತಿಲ್ಲ. ಏಕೆಂದರೆ, 'ಕೊರೊನಾ ಗುರು' ನಮಗೆ ಕಲಿಸಿರುವ ಪಾಠಗಳನ್ನು ನಾವು ಮರೆಯಬಾರದು.

ಈವರೆಗೆ ಪ್ರೇಮವೆನ್ನುವುದು ರಮ್ಯವಾಗಿತ್ತು, ಮೈಮನಸ್ಸುಗಳನ್ನು ಅರಳಿಸುವ ಸಂಗತಿಯಾಗಿತ್ತು. ಈಗದು ಬದುಕನ್ನು ಅರ್ಥಪೂರ್ಣಗೊಳಿಸುವ ವಿಶೇಷವಾಗಬೇಕು. 'ಪ್ರೇಮಿಗಳ ದಿನ' ನಮ್ಮೆಲ್ಲರ ಪ್ರೇಮದ ಶಕ್ತಿಯನ್ನು ಸಮೃದ್ಧಗೊಳಿಸಬೇಕು. ನಾವು ನಮ್ಮನ್ನಷ್ಟೆ ಪ್ರೀತಿಸಿದರೆ ಸಾಲದು, ನಮ್ಮ ಸಂಗಾತಿಯನ್ನು ಪ್ರೀತಿಸಿದರೆ ಸಾಲದು, ನಮ್ಮ ಪ್ರೀತಿಯ ತೆಕ್ಕೆಯಲ್ಲಿ ಇಡೀ ಸಮಾಜ ಇರಬೇಕು. ಆ 'ವಿಶ್ವಪ್ರೇಮ'ಕ್ಕೆ ಕೊರೊನಾ ಕಾಲಘಟ್ಟದ 'ಪ್ರೇಮಿಗಳ ದಿನ' ಮುನ್ನುಡಿ ಬರೆಯಲಿ.

ಪ್ರತಿಕ್ರಯಿಸಿ: **feedback@sudha.co.in**